# ಜನವರಿ, 2017 - ತಾಳೆ ಬೆಳೆ ಕೃಷಿಗೆ ಸೂಕ್ತ ಸಲಹೆಗಳು

- ತಾಳೆ ಬೇಸಾಯದಲ್ಲಿ ನಿಷೆಧಿಸಲಾದ ರಾಸಾಯನಿಕಗಳು: ತಾಳೆ ಬೇಸಾಯದಲ್ಲಿ ಕಳ ನಾಶಕಗಳಾದ 2.4-ಡಿ ಮತ್ತು 2.4.5-ಟಿ ಹಾಗೂ ತಾಮ್ರವನ್ನೊಳಗೊಂಡ ರಾಸಾಯನಿಕಗಳನ್ನು ಬಳಸಬಾರದು. ಈ ರಾಸಾಯನಿಕಗಳಿಂದ ತಾಳೆ ಗಿಡಗಳಿಗೆ ದುಷ್ಪರಿಣಾಮಗಳು ಉಂಟಾಗುತ್ತದೆ.

- ಸಂಚಿ ಹುಳುಗಳ ಬಾಧೆ ಮತ್ತು ನಿರ್ವಹಣೆ: ತಾಳೆ ಗಿಡಗಳ ಗರಿಗಳ ಕೆಳ ಭಾಗದಲ್ಲಿ ಸಂಚಿ ಹುಳುಗಳ ಗೂಡುಗಳು ನೇಥಾಡುತ್ತಿರುವುದು. ಇವು ಎಲೆಗಳನ್ನು ತಿನ್ನುತ್ತದೆ. ಅತಿಯಾದ ಹವಳಿಯಿದ್ದಲ್ಲಿ ಹುಳುಗಳು ಹೆಚ್ಚಿರುವ ಗರಿಗಳನ್ನು ಕತ್ತರಿಸಿ ಸುಡಬೇಕು. ಮೋನೊಕ್ರೊಟೋಫಾಸ್ ನ್ನು (10 ಮಿ.ಲೀ) 10 ಮಿ.ಲೀ ನೀರಿನಲ್ಲಿ ಸೇರಿಸಿ ಬೇರುಗಳ ಮೂಲಕ ನೀಡಬೇಕು.

- ಎಲೆ ತಿನ್ನುವ ಕಂಬಳಿ ಹುಳುಗಳು ಮತ್ತು ನಿರ್ವಹಣೆ: ಎಲೆ ತಿನ್ನುವ ಕಂಬಳಿ ಹುಳುಗಳು ಹೆಚ್ಚಾಗಿ ಕೆಳಗಿನ ಬಲಿತಿರುವ ಗರಿಗಳನ್ನು ತಿನ್ನುತ್ತವೆ. ಇವುಗಳ ನಿಯಂತ್ರಣಕ್ಕೆ 10 ಮಿ.ಲೀ. ಮೋನೋಕ್ರೊಟೋಫಾಸ್ ನ್ನು 10 ಮಿ.ಲೀ. ನೀರಿನಲ್ಲಿ ಹಾಕಿ ಬೇರುಗಳ ಮೂಲಕ ಕೊಡಬೇಕು ಅಥವಾ 2 ಮಿ.ಲೀ ಮೇಲಾತಿಯನ್ ಅಥವಾ ಕ್ವಿನಾಲ್ಫಾಸ್ ನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರಸಿ ಪಾತಿಯಲ್ಲಿ ಸುರಿಯಬೇಕು.

- ಮೊದಲ ವರ್ಷದ ತಾಳೆ ತೋಟಕ್ಕೆ ರಸಗೊಬ್ಬರವನ್ನು ಪ್ರತಿ ಎಕರೆಗೆ ೪೯ ಕೆ.ಜಿ ಯೂರಿಯಾ, ೭೧ ಕೆ ಜಿ ಸಿಂಗಲ್ ಸೂಪರ್ ಫಾಸ್ಫೇಟ್, ೩೮ ಕೆ.ಜಿ. ಮೂರೆಟ್ ಆಫ್ ಪೊಟಾಷ್ ಗಳನ್ನು ನಾಲ್ಕು ಕಂತಿನಲ್ಲಿ ಮತ್ತು ೭ ಕೆ.ಜಿ ಮೆಗ್ನೀ ಷಿಯಂ ಸಲ್ಫೇಟ್ ಗೊಬ್ಬರವನ್ನು ಎರಡು ಕಂತಿನಲ್ಲಿ ನೀಡುವುದು ಸೂಕ್ತ.

- ಎರಡನೇ ವರ್ಷದ ತಾಳೆ ತೋಟಕ್ಕೆ ರಸಗೊಬ್ಬರವನ್ನು ಪ್ರತಿ ಎಕರೆಗೆ ೯೯ ಕೆ.ಜಿ ಯೂರಿಯಾ, ೧೪೨ ಕೆ ಜಿ ಸಿಂಗಲ್ ಸೂಪರ್ ಫಾಸ್ಫೇಟ್, ೭೬ಕೆ.ಜಿ. ಮೂರೆಟ್ ಆಫ್ ಪೊಟಾಷ್ ಗಳನ್ನು ನಾಲ್ಕು ಕಂತಿನಲ್ಲಿ ಮತ್ತು ೧೪ ಕೆ.ಜಿ ಮೆಗ್ನೀ ಷಿಯಂ ಸಲ್ಫೇಟ್ ಗೊಬ್ಬರವನ್ನು ಎರಡು ಕಂತಿನಲ್ಲಿ ನೀಡುವುದು ಸೂಕ್ತ.

- ಮೂರನೇ ವರ್ಷದ ತಾಳೆ ತೋಟಕ್ಕೆ ರಸಗೊಬ್ಬರವನ್ನು ಪ್ರತಿ ಎಕರೆಗೆ ೧೪೮ ಕೆ.ಜಿ ಯೂರಿಯಾ, ೨೧೩ ಕೆ ಜಿ ಸಿಂಗಲ್ ಸೂಪರ್ ಫಾಸ್ಫೇಟ್, ೧೧೪ ಕೆ.ಜಿ. ಮೂರೆಟ್ ಆಫ್ ಪೊಟಾಷ್ ಗಳನ್ನು ನಾಲ್ಕು ಕಂತಿನಲ್ಲಿ ಮತ್ತು ೨೮ ಕೆ.ಜಿ ಮೆಗ್ನೀ ಷಿಯಂ ಸಲ್ಫೇಟ್ ಗೊಬ್ಬರವನ್ನು ಎರಡು ಕಂತಿನಲ್ಲಿ ನೀಡುವುದು ಸೂಕ್ತ.